ಬೆನ್‌ಅನ್ನು ಎಷ್ಟು ವಿಧವಾಗಿ ತಡೆಯಬಹುದೋ ಅಷ್ಟು ವಿಧವಾಗಿ ಪ್ರಯತ್ನಿಸಿ ಸೋತುಹೋದಳು. ಅವನ ಮದಬಲದ ಮುಂದೆ ಅಸಹಾಯಕಳಾಗಿದ್ದಳು. ಏನು ಆಗುತ್ತದೆ ಎನ್ನುವುದು ಗೊತ್ತಾಗುತ್ತಿದ್ದರೂ ಅದನ್ನು ಹೇಗೆ ತಡೆಯಬೇಕೋ, ತಡೆಯಬಹುದೋ ಎಂಬುದು ಮಾತ್ರ ತಿಳಿಯುತ್ತಿರಲಿಲ್ಲ. ಅನಿರೀಕ್ಷಿತವಾದದ್ದು ಸಂಭವಿಸಿದಾಗ ಒಂದೊಂದು ಸಾರಿ ಆಲೋಚನೆ ನಿಂತು ಹೋಗುತ್ತದೆ. ಬಲಿಷ್ಠವಾದ ದೇಹವೂ ಬಲಹೀನವಾಗುತ್ತದೆ. ಅವಳ ಕಣ್ಣುಗಳಿಂದ ಕಣ್ಣೀರು ಹರಿಯುತ್ತಿದ್ದಂತೆಯೇ ಅವಳು ಅಪ್ರಯತ್ನವಾಗಿ ಕಣ್ಣು ಮುಚ್ಚಿದಳು, ಅಷ್ಟೇ. ಬೆನ್ ಅವಳ ಕೆನ್ನೆಗೆ ರಪ್ ಎಂದು ಬಾರಿಸಿದ. 'ಓಪೆನ್ ಯುವರ್ ಐಸ್. ಲುಕ್ ಎಟ್ ಮಿ. ಲುಕ್ ಇಂಟು ಮಿ. ಡು ಯು ಲೈಕ್ ದಿಸ್?' ಎಂದು ಬಲವಂತದಿಂದ ಶ್ರಿಯಾಳನ್ನು ಅವನತ್ತ ನೋಡುವಂತೆ ಮಾಡಿದ. ಹಾಗೇ ಮಾತನಾಡುತ್ತಾ, ಅವನು ಮಾಡುವ ಚರ್ಯೆಗಳಿಗೆ ಅವಳ ದೇಹ ನಡುಗುತ್ತಿತ್ತು. ಶ್ರಿಯಾಗೆ ತಾನು ಅಳುತ್ತಿರುವುದು ಕೂಡ ತಿಳಿಯುತ್ತಿರಲಿಲ್ಲ. ಒಳಗೆ ಅವನು ಇದ್ದಾನೆಂದು ಶ್ರಿಯಾಳ ಶರೀರಕ್ಕೆ ಭಾಸವಾಗುತ್ತಿದೆ. ಅಲ್ಲಿಯವರೆಗೆ ಶ್ರಿಯಾಗೆ ಗೊತ್ತಿರುವಂಥ ಬೆನ್ ಅಲ್ಲ ಅವನು. ಬಲವಾಗಿ ಅವನ ಕೈಗಳ ಕೆಳಗೆ ಒತ್ತಿಹಿಡಿದಿರುವ ತನ್ನ ಕೈಗಳನ್ನು ಹಿಂದಕ್ಕೆ ಎಳೆಯುವ ಪ್ರಯತ್ನ ಮೊದಲು ಮಾಡಿದಳು. ಆದರೆ, ಸಾಧ್ಯವಾಗಲಿಲ್ಲ. ನಲುಗಿ ಹೋಗುತ್ತಿರುವ ಕೈಗಳ ನೋವಿಗಿಂತ ಮತ್ಯಾವುದೋ ನೋವು ಮನವನ್ನು, ದೇಹವನ್ನು ಆಕ್ರಮಿಸಿತು. ಒಂದು ಕಡೆ ಬೆನ್ ದೇಹ ಖುಷಿ ಪಡುತ್ತಿದ್ದರೆ, ಶ್ರಿಯಾ ದೇಹದ ಪ್ರತಿಯೊಂದು ಭಾಗದ ಪ್ರತಿಯೊಂದು ಅಣು ಸಹಾ ನೋವನ್ನು ಅನುಭವಿಸುತ್ತಿತ್ತು.

ಶ್ರಿಯಾಳಿಗೆ ಎಚ್ಚರ ತಪ್ಪುತ್ತಿರುವಂತೆ ಅನಿಸಿತು. ಅವನ ಕಣ್ಣುಗಳಿಗೂ ಮತ್ತು ಅವನ ದೇಹಕ್ಕೂ ಕಾಣುತ್ತಿರುವುದು ಹುಡುಗಿಯ ಶರೀರದ ಭಾಗಗಳು. ಅವನಿಗೆ ಬೇಕಾಗಿರುವುದು ಅಷ್ಟೇ. ಬಯಕೆಯಿಂದ ಉದ್ರಿಕ್ತತೆ ಹೊಂದುತ್ತಿರುವ ದೇಹಕ್ಕೆ ಏನು ಬೇಕೋ ಅದು ಮಾಡುತ್ತಿದ್ದಾನೆ. ತನ್ನನ್ನು ತಾನು ರಿಲೀಸ್ ಮಾಡಿಕೊಳ್ಳುವುದನ್ನು ಬಿಟ್ಟು ಅವನಿಗೆ ಬೇರೆ ಯೋಚನೆ ಇರಲಿಲ್ಲ. ಅದು ಆಗುವವರೆಗೂ ಅವನೊಬ್ಬ ಗಂಡಸು. ಅವನಿಗೆ ಬೇಕಾಗಿರುವುದು ಒಂದು ಹೆಣ್ಣು. ಅವನ ಬಯಕೆ ಬಿಡುಗಡೆಯೇ ಆಗಿತ್ತು. ತನಗೇನು ಬೇಕೋ ಅದನ್ನು ಪಡೆದಿದ್ದ ವಿಜಯದ ಹೆಮ್ಮೆಯಿಂದ ಎದ್ದು ನಿಂತ.

ಮತ್ತೆ ಬೆನ್ ಕಡೆ ನೋಡದೇ ಕಣ್ಣು ಮುಚ್ಚಿದಳು ಶ್ರಿಯಾ. ಪ್ರಾಣವೇ ಇಲ್ಲ ಎಂಬಂತೆ ದೇಹ ನಿಶ್ಚಲವಾಗಿತ್ತು. ಶ್ರಿಯಾಳ ಕಡೆ ಕೂಡಾ ನೋಡದೆ ಬಟ್ಟೆಗಳನ್ನು ಸರಿಪಡಿಸಿಕೊಂಡು ಹೊರಗೆ ಹೊರಟು ಬಿಟ್ಟ.

* * *

ಕೇಳುತ್ತಿರುವ ಮಾಲತಿಯ ಕಣ್ಣುಗಳು ಭಯದಿಂದ ಮತ್ತಷ್ಟೂ ದೊಡ್ಡದಾದವು. ದೇಹವೆಲ್ಲಾ ನಡುಕ... ನೋವು, ದುಃಖ, ಆವೇದನೆ, ಆಗ್ರಹ. ಬಗೆಬಗೆಯ ಉದ್ವಿಗ್ನತೆಗಳು ಅವಳನ್ನು ಸುತ್ತುವರೆದವು. ಒಂದೂ ಮಾತಿಲ್ಲದಂತೆ ಕುಳಿತಿರುವ ತಾಯಿಯ ಮಡಿಲಲ್ಲಿ ತಲೆಯಿಟ್ಟುಕೊಂಡು ಬಿಕ್ಕಿಬಿಕ್ಕಿ ಅತ್ತಳು ಶ್ರಿಯಾ.

ಒಂದೆಡೆ ನೋವು, ಇನ್ನೊಂದೆಡೆ ಈಗ ಏನು ಎಂಬ ಪ್ರಶ್ನೆ. ನಿಧಾನವಾಗಿ ಮಾಲತಿ ಗಂಟಲು ಸರಿ ಮಾಡಿಕೊಂಡಳು.

'ದೂರು ಕೊಟ್ಟಿದ್ದೀಯಾ?' ತಾಯಿ ಕೇಳಿದ್ದಕ್ಕೆ ಶ್ರಿಯಾ ತಲೆಯಾಡಿಸಿದಳು.

'ಆ ರಾತ್ರಿ ನಾನು ಕೋಣೆಗೆ ಹೇಗೆ ಬಂದೆನೋ ಗೊತ್ತಿಲ್ಲಮ್ಮಾ... ಬೆಳಗಾದರೂ ಮಾರ್ಗರೆಟ್ ಕೋಣೆಗೆ ಬಂದಿರಲಿಲ್ಲ. ನನಗೆ ಯಾರೊಂದಿಗೂ ಮಾತಾಡಬೇಕೆಂದು ಅನ್ನಿಸಲಿಲ್ಲ. ಯಾರಿಗೂ ಹೇಳಬೇಕೆಂದೂ ಅನ್ನಿಸಲಿಲ್ಲ. ಹಾಗೆ ಎದ್ದು ನಾನೊಬ್ಬಳೇ ಕ್ಯಾಂಪಸ್ ಪೊಲೀಸರ ಬಳಿಗೆ ಹೋದೆ. ಆಫ್ ಕ್ಯಾಂಪಸ್‌ನಲ್ಲಿ ನಡೆದಿದ್ದರಿಂದ ಕಂಪ್ಲೇಂಟ್ ಸ್ವೀಕರಿಸಿಲ್ಲ. ನಾನು ಅತ್ತುಬಿಟ್ಟೆ. ನಾನು ಅಳುತ್ತಿದ್ದರೆ, ಟಿಶ್ಯೂ ನೀಡಿ ಸಾರೀ ಹೇಳಿದರು. ಎಲ್ಲಿ ಕಂಪ್ಲೇಂಟ್ ಮಾಡಬೇಕೆಂದು ಹೇಳಿದರು. ಎಲ್ಲದಕ್ಕೂ ಮೊದಲು ಆಸ್ಪತ್ರೆಗೆ ಹೋಗಿ ರೇಪ್‌ಕಿಟ್ ಪರೀಕ್ಷೆ ಮಾಡಿಸಿಕೊಳ್ಳಬೇಕೆಂದರು' ಶ್ರಿಯಾ ಧ್ವನಿಯಲ್ಲಿ ಬಚ್ಚಿಡಬೇಕೆನಿಸಿದರೂ-ಬಚ್ಚಿಡಲಾರದ ನೋವು.

ಮಾಲತಿಯಲ್ಲಿ ಕೋಪ ಉಕ್ಕಿತ್ತು. 'ಹೆಸರುವಾಸಿಯಾದ ಐ ವೀ ಲೀಗ್ ಕಾಲೇಜ್ ಎಂದು ಸಾವಿರಾರು ಡಾಲರ್ ಫೀಸ್ ಕಟ್ಟಿದರೆ ಕ್ಯಾಂಪಸ್, ಆಫ್ ಕ್ಯಾಂಪಸ್ ಅಂತ ಮಾತಾಡ್ತಾರಾ? ಅಸಲಿಗೆ... ಅಸಲಿಗೆ...' ಮಾತು ಮುಗಿಸಲಾಗಲಿಲ್ಲ ಮಾಲತಿಗೆ.